ಸಿಟ್ಟಾಗಲಾರಂಭಿಸಿದ್ದ. ಸ್ವಲ್ಪ ಸುಸ್ತೆಂದು ಮಲಗಿದರೂ 'ಕೆಲ್ಸ ಬಿಡು, ಇದೆಲ್ಲ ಏನೂ ಬೇಕಾಗಿಲ್ಲ' ಎಂದು ಹೊಸ ರಾಗ ಆರಂಭಿಸಿದ್ದ. ಮಾತು ಮಾತಿಗೂ ಕೆಲಸ ಬಿಡೆಂದು ಹೇಳುವುದೆ ಅಭ್ಯಾಸವಾದಾಗ ಪಲ್ಲವಿಗೆ ಮನೆಯಲ್ಲಿರುವ ಹೊತ್ತು ಜಗಳ ಮಾಡುವ ಹೊತ್ತಾಗಿ ಕಾಣತೊಡಗಿತು. ಪ್ರತಿ ಮಾತಿಗೆ, ಸಂಬಂಧವಿಲ್ಲದಿದ್ದರೂ ಮಾತುಕತೆ ಕೊನೆಗೊಳ್ಳುವುದು 'ಕೆಲಸ ಬಿಡು' ಎಂಬ ವಿಜ್ಜುವಿನ ಖಡಾಖಂಡಿತವಾದ ಹೇಳಿಕೆಯಲ್ಲಿಯೇ. ಅಂದು ತಲೆ ನೋವೆಂದು ಬ್ಯಾಂಕಿನಿಂದ ಬೇಗ ಬಂದಿದ್ದಳು ಪಲ್ಲವಿ. ಮಗಳಿಗೆ ಸರ್‌ಪ್ರೈಜ್ ಕೊಡಲೆಂದು ಸ್ಕೂಲಿನ ಬಳಿ ಹೋಗಿ ಬಂದಾಗಲೂ 'ಇದೇ ಪುಣ್ಯದ ಕೆಲಸ. ಸುಮ್ನೆ ಅಲ್ಲಿ ಮೆರೆದುಕೊಂಡು ಯಾಕಿರಬೇಕು' ಎಂದಾಗ ಮಾತ್ರ ದನಿ ಎತ್ತರಿಸಿ ಮಾತಾಡಿದ್ದಳು. 'ವಿಜ್ಜು, ಏನದು ಮೆರೆಯೋದು ಅಂದ್ರೆ. ನೀನು ಮಾಡ್ತಿರೋ ಕೆಲಸದಲ್ಲಿ ನೀನು ಮೆರಿತಾ ಇದೀಯಾ? ಅದು ನಿನ್ನ ವೃತ್ತಿಯಾದ್ರೆ ಇದು ನನ್ನ ವೃತ್ತಿ ಅಷ್ಟೇ. ವೆರಿ ಸಿಂಪಲ್. ಇದೇ ಕೊನೆ, ನೀನು ಏನಂದ್ರೂ ನಾನು ಕೆಲ್ಸ ಮಾತ್ರ ಬಿಡೋಳಲ್ಲ, ಎಷ್ಟೇ ಕೊಂಕು ಮಾತಾಡು; ನಿನ್ನ ಮರ್ಜಿ ಅಷ್ಟೇ' ಎಂದು ಹೇಳಿದ್ದಳು. ಸಿಟ್ಟಿನಿಂದ ಕೆಂಪಾಗಿತ್ತು ವಿಜ್ಜುವಿನ ಮುಖ. ಬ್ಯಾಂಕ್, ಮನೆ, ಮಗಳು, ವಿಜ್ಜು ಜೊತೆಯಲ್ಲಿ ಮಾತು, ಮುನಿಸು ಎಲ್ಲದರ ಜೊತೆಗೆ ದಿನಗಳು ಗಾಳಿಗೆ ತರಗೆಲೆಗಳು ಸರಸರ ಓಡಿದಂತೆ ಓಡುತ್ತಿದ್ದವು.

ಇಷ್ಟು ಗಡಿಬಿಡಿಗಳ ನಡುವೆಯೂ ವಿಜ್ಜು ಇತ್ತೀಚೆಗೆ ಫೋನಿಗೆ ಹೆಚ್ಚು ಅಡಿಕ್ಟ್ ಆಗಿದ್ದನ್ನು ಗಮನಿಸಿದ್ದಳು. ಸಂಜೆ ಬ್ಯಾಂಕಿನಿಂದ ಬೇಗ ಬಂದು ಅಡುಗೆನೂ ಮಾಡಿ ಮಗಳ ಹೋಮ್‌ವರ್ಕ್ ನೋಡುವಷ್ಟರಲ್ಲಿ ವಿಜ್ಜು ಬಂದು ಬಿಡುತ್ತಿದ್ದ. ರಾತ್ರಿ ಊಟ ಮಾಡಿ, ಅಡುಗೆ ಮನೆಯ ಕೆಲಸ ಮುಗಿಸಿ ವಿಜ್ಜು ತೋಳಿಗೆ ಬಂದು ಒರಗಬೇಕು ಎಂದುಕೊಂಡರೆ ಸದಾ ಫೋನಿನಲ್ಲಿ ವ್ಯಸ್ತವಿರುತ್ತಿದ್ದ. ಒಂದೆರಡು ಬಾರಿ ಹೇಳಿದರೂ ಗಮನ ಕೊಟ್ಟಿರಲಿಲ್ಲ. ಅವನ ಫೋನ್ ತೆಗೆದು ನೋಡುವ ಮನಸ್ಸಾಗಿರಲಿಲ್ಲ. ಮಲಗುವ ಹೊತ್ತಿನಲ್ಲಿ ಮೆಸೇಜ್ ಸೌಂಡ್ ದೊಡ್ಡ ಕಿರಿಕಿರಿ ಎನಿಸುತ್ತಿತ್ತು. ಮೆಸೇಜ್ ಮಾಡುವಾಗ, ನೋಡುವಾಗ ಅವನ ಮುಖದ ಪ್ರಸನ್ನತೆ ಪಲ್ಲವಿಗೆ ಸಂಶಯವನ್ನೂ ಮೂಡಿಸಿತ್ತು. ಕೇಳಿದರೆ ಎಲ್ಲಿ ಮುನಿಸಿಕೊಳ್ಳುತ್ತಾನೊ ಎಂಬುದಲ್ಲದೇ ಅಷ್ಟು ಸಣ್ಣತನ ತೋರಲು ಮನಸ್ಸೂ ಆಗದೆ ಸುಮ್ಮನಾಗಿದ್ದಳು. ಹೋಗಿ ತಬ್ಬಿಕೊಂಡಾಗಲೂ ವಿಜ್ಜು ಮೆಲ್ಲಗೇ ಅವಳನ್ನು ಹಾಗೇ ಮಲಗಿಸುವಂತೆ ಮೃದಡವಿ ಫೋನಿಗೆ ಅಂಟಿಕೊಳ್ಳುತ್ತಿದ್ದ. 'ಪ್ಲೀಸ್ ವಿಜ್ಜು ಸಾಕು ಮಲ್ಕೊಳ್ಳೋಣ' ಎಂದು ರಮಿಸಿದಾಗಲೂ 'ಎಸ್ ಎಸ್ ಮಲ್ಕೊ' ಎಂದು ಬೆನ್ನು ತಟ್ಟುತ್ತಿದ್ದ. ಅದೊಂದು ಸಾರಿ, ಮೆಸೇಜ್ ರಿಂಗಣಗಳಿಂದ ರೋಸಿ ಹೋಗಿ ಫೋನನ್ನು ಕಿತ್ತುಕೊಂಡು ಸೈಡ್ ಟೇಬಲ್ ಮೇಲೆ ಕುಕ್ಕಿದ್ದಳು. ಸಿಟ್ಟುಗೊಂಡ ವಿಜ್ಜು, 'ಡೊಂಟ್ ಬಿ ಸಿಲ್ಲಿ, ಹುಡುಗರಂತೆ ಆಡ್ಬೇಡಾ' ಎಂದಾಗ ಪಲ್ಲವಿಗೂ ಸಿಟ್ಟು ಬಂದಿತ್ತು. 'ಮನೆಗೆ ಬಂದ ಮೇಲೂ ಏನಿರುತ್ತೆ? ಯಾವಾಗ ನೋಡಿದ್ರೂ ಫೋನಲ್ಲೇ ಇರ್ತಿಯಾ, ನಂಗೆ ಇತ್ತೀಚೆಗೆ ಅಡುಗೆ ಮನೆ ಕೆಲ್ಸಕ್ಕೂ ಹೆಲ್ಪ್ ಮಾಡಲ್ಲ, ಬಂದ ಹಾಗೇ ಫೋನಲ್ಲೇ ಮುಳುಗಿ ಬಿಡ್ತಿಯಾ...' ಕಿರುಚಿದಂತೆ ಮಾತಾಡಿದ್ದಳು. ಅಷ್ಟೇ ದನಿ ಎತ್ತರಿಸಿ ವಿಜ್ಜು, 'ಕಿರಿಚ್ಬೇಡಾ, ಏನೋ ಇರತ್ತೆ. ಕೋಲಿಗ್ಸ್ ಜೊತೆ. ನಿಂಗೇನಾಗ್ಬೇಕು ಅದೆಲ್ಲ ಕಟ್ಟಿಕೊಂಡು.' ಎದ್ದು ವಾಶ್ ರೂಮಿಗೆ ಹೋಗಿದ್ದ. ಮುಖಕ್ಕೆ ಹೊಡೆದಂತಾಗಿತ್ತು.

ವಿಜ್ಜುನ ಫೋನ್ ನೋಡುವ ಆಸಕ್ತಿಯೂ ಇರಲಿಲ್ಲ ಪಲ್ಲವಿಗೆ. ಏನೋ ಸಿಕ್ಕು ಸಿಕ್ಕಿಕೊಂಡಂತೆ ಅನಿಸಿತು. ದಾಂಪತ್ಯದ ಏಕತಾನತೆ ಅಂದ್ರೆ ಇದೇನಾ? ಸಣ್ಣ ಗಮನವನ್ನು ಮನುಷ್ಯ ಹೊರಗಿನಿಂದ ಸದಾ ಬಯಸುತ್ತಾನಾ! ಅಕೌಂಟೆಂಟ್ ಅಭಿಯ 'ವಾವ್ ನೈಸ್ ಸಾರಿ' ಕಾಂಪ್ಲಿಮೆಂಟ್ ತನಗೆ ಖುಷಿ ಕೊಟ್ಟಂತೆ ವಿಜ್ಜುಗೂ ಆಗಿರಬಹುದೇನೋ ಎಂದು ಯೋಚಿಸುತ್ತಾ ದಿನ ಕಳೆಯುತ್ತಿದ್ದರೂ ಯಾವುದೋ ಒಂದು ಎಳೆ ತಪ್ಪುತ್ತಿದೆ ಎನ್ನುವುದೂ ಅವಳ ಗಮನಕ್ಕೆ ಬಂದಿತ್ತು. ತಾನೇ ಆದಷ್ಟು